# ನಿತ್ಯಕಲ್ಯಾಣ : ಮನೆಮನೆಗೆ ಚಿಂತನ : 3ನೇ ದಿನದ ಸುದ್ದಿ

ಚಿತ್ರದುರ್ಗ ಜು. 31 - ಮಿದುಳಿನ ಶಕ್ತಿಯನ್ನು ಮಾನವ ಮರೆಯುತ್ತಿದ್ದಾನೆ. ಗಂಭೀರವಾದ ಸಮಸ್ಯೆಯನ್ನು ಬಗೆಹರಿಸುವ ಶಕ್ತಿ ಮಿದುಳಿಗಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ನಗರದ ತುರುವನೂರು ರಸ್ತೆಯ ದಯಾನಂದ್ ಅವರ ಮನೆಯಲ್ಲಿ ನಡೆದ ನಿತ್ಯ ಕಲ್ಯಾಣ; ಮನೆಮನೆಗೆ ಚಿಂತನ 3ನೇ ದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಾಹಿತ್ಯ ಪ್ರಜ್ಞೆ ವಿಷಯ ಕುರಿತು ಶ್ರೀಗಳು ಮಾತನಾಡಿದರು.

ಪ್ರಜ್ಞೆ ಜಾಗೃತವಾಗಬೇಕು. ಪ್ರತಿದಿನವೂ ಯಾರು ತಮ್ಮ ಮೆದುಳನ್ನು ನೋಡಿಕೊಳ್ಳುತ್ತಾರೋ ಅವರ ಮಸ್ತಕ ಅರಳಿದ ಪುಸ್ತಕ. ಮಸ್ತಕ ಅರಳಿದರೆ ನೂರಾರು ಪುಸ್ತಕ ಬರೆಯಬಹುದು. ಪುಸ್ತಕಕ್ಕೆ ಪ್ರೇರಣೆ ನಮ್ಮ ಮಸ್ತಕ. ಮಿದುಳಿನ ಶಕ್ತಿಯನ್ನು ಮಾನವ ಮರೆಯುತ್ತಿದ್ದಾನೆ. ಗಂಭೀರವಾದ ಸಮಸ್ಯೆಯನ್ನು ಬಗೆಹರಿಸುವ ಶಕ್ತಿ ಮಿದುಳಿಗಿದೆ. ಇದನ್ನು ಬಿಟ್ಟು ಕೆಲವರು ಸತ್ತಂತೆ ಇರುತ್ತಾರೆ. ಸತ್ತಂತೆ ಇರುವವರನ್ನು ಪ್ರಜ್ಞೆ ಎಚ್ಚರಿಸುತ್ತದೆ. ಸಾಹಿತ್ಯವನ್ನು ಬಿಟ್ಟು ಸಾಹಿತಿ ಇಲ್ಲ. ಸಾಹಿತಿ ಜೊತೆಯಲ್ಲಿ ಸಾಹಿತ್ಯ ಬರುತ್ತದೆ. ಸಮಾಜಕ್ಕೆ, ಸಾರ್ವತ್ರಿಕರಿಗೆ ಮೂರು ಕಾಲದಲ್ಲಿಯೂ ಹಿತ ಬಯಸುವವರು ಸಾಹಿತಿಗಳು.

ಸಾಹಿತ್ಯಕ್ಕೆ ಮೂಲದ್ರವ್ಯ ಯಾವುದು? ಕೆಲವರು ಭಕ್ತಿಯಿಂದ ಬರವಣಿಗೆಯನ್ನು ಆರಂಭಿಸುತ್ತಾರೆ. ಅವರ ಸಾಹಿತ್ಯದ ಮೂಲದ್ರವ್ಯ ಭಕ್ತಿ. ಅದರ ಮೂಲಕ ಸಂಕೀರ್ತನೆಗಳು, ತತ್ವಪದಗಳನ್ನು ಬರೆದರು. ಕವಿಸಮಯ ಬಹಳ ಮುಖ್ಯವಾದುದು. ಸೂರ್ಯೋದಯ ವಿಸ್ಮಯವನ್ನು ಉಂಟುಮಾಡುತ್ತದೆ. ಅದು ಕವಿಸಮಯ. ಹಾರಾಡುವ ಪಕ್ಷಿಗಳನ್ನು, ಅರಳಿದ ಪುಷ್ಪವನ್ನು ನೋಡಿ, ಹರಿಯುವ ನದಿಯನ್ನು, ಪ್ರಕೃತಿಯನ್ನು ನೋಡಿ ಸಾಹಿತ್ಯ ನಿರ್ಮಿಸುತ್ತಾರೆ. ಅವರಿಗೆ ಪ್ರಕೃತಿ ಸ್ಫೂರ್ತಿ ನೀಡುತ್ತದೆ. ಕವಿ ಸಮಯದ ಜೊತೆ ಕವಿ ಹೃದಯ. ಕವಿ ಸಮಯ + ಕವಿ ಹೃದಯ = ಕಾವ್ಯೋದಯ. ಸಾಹಿತ್ಯ ರಚನೆ ಬಹಳ ಸಂದರ್ಭದಲ್ಲಿ ಸಂಘರ್ಷಕ್ಕೆಡೆ ಮಾಡಿಕೊಡುತ್ತದೆ. ಸಂಘರ್ಷವನ್ನು ಆಧಾರವಾಗಿಟ್ಟುಕೊಂಡು ಸಾಕ್ರೆಟಿಸ್, ಕಾರ್ಲ್‌ಮಾರ್ಕ್ಸ್, ಟಾಲ್‌ಸ್ಟಾಯ್ ಮೊದಲಾದವರು ಇಂತಹ ಸಾಹಿತ್ಯ ರಚನೆ ಮಾಡಿದರು. ಸಂಘರ್ಷ ಇರುವಲ್ಲಿ ಉತ್ಕರ್ಷ ಇರುತ್ತದೆ. ಸಾಹಿತ್ಯದ ಮೂಲದ್ರವ್ಯ ಸಂವೇದನೆ.

ಸ್ವಾನುಭಾವದ ಮೂಲಕ ಸಾಹಿತ್ಯ ರಚನೆ. ಅನುಭವ ಸಾಹಿತ್ಯದ ಮೂಲ ಪ್ರಾಣ. ವಚನಕಾರರು ಅನುಭವಪೂರ್ಣ ಸಾಹಿತ್ಯ ರಚನೆ ಮಾಡಿದರು. ಸಮಾಜದಲ್ಲಿ ನೋಡಿದ್ದನ್ನು ವಚನ ರೂಪದಲ್ಲಿ ಸಾಹಿತ್ಯ ರಚನೆ ಮಾಡಿದರು. ವಚನಗಳಲ್ಲಿ ದರ್ಶನ ಇದೆ, ಪ್ರಜ್ಞೆ ಇದೆ. ವಿಕಾಸವನ್ನು ವಚನಗಳಲ್ಲಿ ಕಾಣಬಹುದು. ಸೂಫಿ ಸಂತರ, ಷರೀಫರ ತತ್ವಪದಗಳು ಮುಖ್ಯವಾದವು. ಸಾಹಿತ್ಯದ ಮೂಲದ್ರವ್ಯ ಸಮಾಜದ ಪರಿವರ್ತನೆ. ಸಮಾಜಮುಖಿಯಾದಾಗ ಅನುಭವಗಳಾಗುತ್ತವೆ. ಜನಮುಖಿ ಸಮಾಜಮುಖಿಯಾದವರು ಅನುಭವ ಮುಖಿಯಾಗುತ್ತಾರೆ. ಇಲ್ಲವಾದರೆ ದುಃಖಿಗಳಾಗುತ್ತಾರೆ. ಅನುಭವದ ಬಾಗಿಲು ಮುಚ್ಚಬಾರದು. ಭೌತಿಕಯಾನ ಅನುಭವ ಯಾನ. ಅಲ್ಲಿ ಅನುಭವ ಮಂಟಪ ಇರುತ್ತದೆ ಎಂದು ಹೇಳಿದರು.

ಸಮ್ಮುಖ ವಹಿಸಿದ್ದ ಹಿರಿಯೂರು ಆದಿಜಾಂಬವ ಮಠದ ಶ್ರೀ ಷಡಕ್ಷರಮುನಿ ದೇಶೀಕೇಂದ್ರ ಸ್ವಾಮಿಗಳು ಮಾತನಾಡಿ, ಮುರುಘಾ ಶರಣರ ಸಾಹಿತ್ಯಾಸಕ್ತಿ ದೊಡ್ಡದು. ಎಲ್ಲರ ಬದುಕು ಕಲ್ಯಾಣವಾಗಲಿ ಎಂದು ಸದಾ ಸಾಹಿತ್ಯ ರಚಿಸುತ್ತಿರುತ್ತಾರೆ. ಎಲ್ಲಾ ಬರಹಗಳು ಸಾಹಿತ್ಯವೇ. ಸಾಹಿತ್ಯವು ಬದುಕನ್ನು ಕಟ್ಟಿಕೊಡುವಂತವು ಗಳಾಗಬೇಕು. ಮುರುಘಾ ಶರಣರು ಅಧ್ಯಯನಶೀಲರು. ಸಾಹಿತ್ಯವನ್ನು ಅಧ್ಯಯನ ಮಾಡುತ್ತ ಸುಸ್ಥಿರ ಬದುಕನ್ನು ಕಟ್ಟಿಕೊಡುತ್ತಾರೆ.

ಯಾವ ಸಾಹಿತ್ಯಕ್ಕೆ ತಿದ್ದುವ ಗುಣ ಇರುತ್ತದೋ ಅದು ಉತ್ತಮ ಸಾಹಿತ್ಯ ಎನಿಸಿಕೊಳ್ಳುತ್ತದೆ. ಅನ್ನ ನೀರಿನಷ್ಟೆ ಮುಖ್ಯವಾದುದು ಸಾಹಿತ್ಯ. ವಿಶಾಲ ಹೃದಯವುಳ್ಳವರು ಸಾಹಿತ್ಯವನ್ನು ಅಪ್ಪಿಕೊಳ್ಳುತ್ತಾರೆ ಎಂದು ನುಡಿದರು.

ಮುಖ್ಯಅತಿಥಿ ಶ್ರೀಮತಿ ಷರೀಫಾಬಿ ಮಾತನಾಡಿ, ಅನೇಕ ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತ್ಯವೆಂಬ ಹೆಗ್ಗಳಿಕೆ ನಮ್ಮ ಕನ್ನಡ ಸಾಹಿತ್ಯಕ್ಕಿದೆ. ಸಾಹಿತ್ಯವನ್ನು ಓದುವುದರಿಂದ ಜ್ಞಾನದ ವಿಸ್ತಾರವಾಗುತ್ತದೆ. ಉತ್ತಮ ಕಾರ್ಯಗಳಿಗೆ ಯಾವತ್ತೂ ಆಶೀರ್ವಾದ ಇರುತ್ತದೆ. ಸಾಹಿತ್ಯ ಓದುತ್ತ ನಮ್ಮನ್ನು ನಾವು ತಿದ್ದಿಕೊಳ್ಳುವುದು. ನಾವು ಯಾವ ರಾಜ್ಯದಲ್ಲಿರುತ್ತೇವೋ ಅಲ್ಲಿಯ ಭಾಷೆಯನ್ನು ನಾವು ಕಲಿಯಬೇಕು. ನಮ್ಮ ನಾಡು ಕನ್ನಡ ನಾಡು. ಇಲ್ಲಿ ಕನ್ನಡ ಮಾತನಾಡಲು ಯಾವುದೇ ಕೀಳರಿಮೆ, ಹಿಂಜರಿಕೆ ಇರಬಾರದು ಎಂದು ಹೇಳಿದರು.

ಕಾರ್ಯಕ್ರಮ ದಾಸೋಹಿಗಳಾದ ದಯಾನಂದ್ ವೇದಿಕೆಯಲ್ಲಿದ್ದರು.  ಜಮುರಾ ಕಲಾವಿದರು ಪ್ರಾರ್ಥಿಸಿದರು. ನುಲೇನೂರು ಶಂಕ್ರಪ್ಪ ಸ್ವಾಗತಿಸಿದರು. ಜಯದೇವ ನಿರೂಪಿಸಿದರು.




